**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂಃ8325/2022**

ಸಿ.ಡಬ್ಲ್ಯೂ –10 ಪಿ.ಡಬ್ಲ್ಯೂ -8

| | | |
|---|---|---|
| ಹೆಸರು | ಃ | ದತ್ತು |
| ತಂದೆಃಗಂಡ | ಃ | ಕ್ಷೇಮಲಿಂಗ |
| ವಯಸ್ಸು | ಃ | 43 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ನರೋಣಾ |

ದಿನಾಂಕಃ 17-01-2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-1 ಅಣ್ಣ ತಮ್ಮಕಿ. ಚಾಸಾ-9 ನನ್ನ ಕಾಕಿ. ಚಾಸಾ-2 ರಿಂದ 8, 11, 12 ರವರ ಪರಿಚಯ ಇರುತ್ತದೆ. ಮೃತ ಭಗವಂತ ನನ್ನ ಸಂಬಂಧಿಕ. ದಿ29.05.2022 ರಂದು ನಾನು ಬೆಳಗ್ಗೆ ಹೊಲದಲ್ಲಿ ನೀರು ಬಿಡುತ್ತಿದ್ದು 6.45 ಗಂಟೆಗೆ ಪಕ್ಕದಲ್ಲಿಯೇ ನಮ್ಮ ಕಾಕಾ ಕಾಕಿಯ ಮನೆ ಇದ್ದು ಅವರು ಅಳುವ ಶಬ್ದ ಕೇಳಿ ನಾನು ಹೋಗಿ ಕೇಳಿದಾಗ ಚಾಸಾ-6 ರವರು ಕರೆ ಮಾಡಿ ನನ್ನ ಮಗನಿಗೆ ಅಪಘಾತವಾಗಿ ಭೋದನ ಬ್ರಿಡ್ಜ ಮುಂದೆ ಮೃತಪಟ್ಟಿರುತ್ತಾನೆ ಎಂದು ತಿಳಿಸಿದನು ನಂತರ ನನ್ನನ್ನು ಅವರೊಂದಿಗೆ ಕರೆದುಕೊಂಡು ಹೋದರು. ನಾನು ಅಲ್ಲಿ ಹೋಗಿ ನೋಡುವವರೆಗೂ ಮೃತಪಟ್ಟಿದ್ದರು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾ ಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಚಾಸಾ-6 ರವರು 7.10 ಗಂಟೆಗೆ ಕುಶಪ್ಪನ ತಾಂಡಾದ ಬ್ರಿಡ್ಜ ಮುಂದೆ ಕ್ರೂಸರದವನು ಅತಿ ವೇಗವಾಗಿ ನಿಶ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಅಪಘಾತಪಡಿಸಿರುತ್ತಾನೆ ಎಂದು ತಿಳಿಸಿದರು ಎಂದರೆ ಸರಿ. ಮೃತ ಭಗವಂತರವರಿಗೆ ಭಾರಿ ರಕ್ತಗಾಯವಾಗಿ ಮುಖಕ್ಕೆ ತಲೆಗೆ ಪೆಟ್ಟಾಗಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಕ್ರೂಸರ ಸಂಖ್ಯೆ ಕೆಎ-48/ಎ0521 ಇರುತ್ತದೆ ಎಂದರೆ ಸರಿ. ಚಾಲಕನ ಹೆಸರು ವಿಷ್ಣು ಇರುತ್ತದೆ ಎಂದರೆ ಸರಿ. ಕುಶಪ್ಪನ ತಾಂಡಾದ ಬಳಿ ವಾಹನ ಬಿಟ್ಟು ಓಡಿ ಹೋಗಿರುತ್ತಾರೆ ಎಂದರೆ ಸರಿ. ಚಾಸಾ-7, 8 ಘಟನೆ ನೋಡಿರುತ್ತಾರೆ ಎಂದರೆ ಸರಿ. ನಾನು ಈ ರೀತಿ ಪೋಲಿಸರ ಎದುರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ.ಎಸ.ಸಿ. ವಕೀಲರಿಂದಃ**

ನನ್ನ ಹೇಳಿಕೆಯನ್ನು ಘಟನೆ ನಡೆದ ದಿನದಂದೇ 7.30 ರಿಂದ 8.00 ಗಂಟೆಗೆ ಪೋಲಿಸ ಠಾಣೆಯಲ್ಲಿ

ಪಡೆದಿರುತ್ತಾರೆ. ಆರೋಪಿಯನ್ನು ನಾನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಸಾಕ್ಷಿ ನಮ್ಮೂರಿನಲ್ಲಿ ಸಂತೆಯಲ್ಲಿ ನೋಡಿರುತ್ತೇನೆ ಎಂದು ಹೇಳುತ್ತಾರೆ. ಆರೋಪಿಯ ಪೂರ್ಣ ಹೆಸರು ವಿಷ್ಣು ಪ್ರಭು ಚವಾಣ ಇರುತ್ತದೆ. ನಾನು ಹೊಲದ ಪಕ್ಕದಲ್ಲಿಯೇ ಇರುತ್ತದೆ. ನಮ್ಮ ಮನೆ ಊರಲ್ಲಿ ಇರುತ್ತದೆ. ಚಾಸಾ-1 ರವರ ಮನೆ ಹೊಲದಲ್ಲಿ ಇರುತ್ತದೆ. ನಾನು ಪೋಲಿಸರ ಮುಂದೆ ನಾನು ನೀರು ಬಿಡುವಾಗ ನನ್ನ ಕಾಕಾ ಕಾಕಿ ಅಳುವ ಶಬ್ದ ಕೇಳುತ್ತಿತ್ತು ಎಂದು ಹೇಳಿರುತ್ತೇನೆ ಎಂದರೆ ಸರಿ. ಚಾಸಾ-1 ರವರ ಮನೆಯಿಂದ ಅಪಘಾತವಾದ ಸ್ಥಳ ಸುಮಾರು 4-5 ಕಿ.ಮಿ. ಅಂತರದಲ್ಲಿ ಇದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು 2 ಕಿ.ಮಿ. ಅಂತರದಲ್ಲಿ ಇದೆ ಎಂದು ಹೇಳುತ್ತಾರೆ. ನರೋಣಾದಿಂದ ಕುಶಪ್ಪನ ತಾಂಡಾ ಕ್ರಾಸ 4.5 ಕಿ.ಮಿ. ಅಂತರದಲ್ಲಿ ಇರುತ್ತದೆ. ಅಪಘಾತವಾದ ಸ್ಥಳದಿಂದ ಕುಶಪ್ಪನ ತಾಂಡಾ ಕ್ರಾಸ 2.5 ಕಿ.ಮಿ. ಅಂತರದಲ್ಲಿ ಇರುತ್ತದೆ. ಇಂದು ನ್ಯಾಯಾಲಯಕ್ಕೆ ಚಾಸಾ-1 ರವರು ನನ್ನೊಂದಿಗೆ ಬಂದರುತ್ತಾರೆ ಎಂದರೆ ಸರಿ. ಚಾಸಾ-1 ರವರು ಸಾಕ್ಷಿ ಹೇಳು ಎಂದ ಕಾರಣ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಸಾಕ್ಷಿ ಮುಂದುವರೆದು ಪೋಲಿಸರು ನೋಟಿಸ್ಸು ನೀಡಿರುತ್ತಾರೆ ಎಂದು ಹೇಳುತ್ತಾರೆ. ಕುಶಪ್ಪನ ತಾಂಡಾ ಕ್ರಾಸ ದಿಂದ ನರೋಣಾ ರಸ್ತೆವರೆಗೂ ಕಚ್ಚಾ ರಸ್ತೆ ಇದೆ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳದಲ್ಲಿ ರಸ್ತೆ ಸರಿ ಇದೆ ಎಂದರೆ ಸರಿ. ಕುಶಪ್ಪನ ತಾಂಡಾ ಕ್ರಾಸದಿಂದ ಘಟನಾ ಸ್ಥಳದ ವರೆಗೂ ಕಚ್ಚಾ ರಸ್ತೆ ಇದೆ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳದಲ್ಲಿ ತಿರುವು ಇದೆ ಎಂದರೆ ಸರಿ. ತಿರುವು ಇರುವ ಕಾರಣ ಸಾಮಾನ್ಯವಾಗಿ ವಾಹನಗಳು ನಿಧಾನವಾಗಿ ಹೋಗುತ್ತವೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅರೋಪಿ ಅತಿ ವೇಗವಾಗಿ ಚಲಾಯಿಸುತ್ತಿದ್ದ ಎಂದು ಹೇಳುತ್ತಾರೆ. ಆರೋಪಿ ವಾಹನವನ್ನು ಅತಿ ವೇಗವಾಗಿ ಚಲಾಯಿಸುತ್ತಿದ್ದ ಎಂದು ನಾನು ಕಣ್ಣಾರೇ ನೋಡಿರುವುದಿಲ್ಲ. ಚಾಸಾ-6 ರವರು ಹೇಳಿದ ನಂತರವೇ ನನಗೆ ಈ ವಿಷಯ ಗೊತ್ತಾಗಿರುತ್ತದೆ ಎಂದರೆ ಸರಿ. ಚಾಸಾ-1 ರವರ ಮಗನೇ ವಾಹನವನ್ನು ಅತಿ ವೇಗವಾಗಿ ಚಲಾಯಿಸಿಕೊಂಡು ಹೋಗಿ ನಿಧಾನವಾಗಿ ಬರುತ್ತಿದ್ದ ಆರೋಪಿಯ ವಾಹನದ ಬಲಗಡೆಗೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿ ತನ್ನ ವಾಹನವನ್ನು ಕಚ್ಚಾ ರಸ್ತೆ ಇದ್ದ ಕಾರಣ ಸರಿಯಾದ ಮಾರ್ಗದಲ್ಲಿ ನಿಧಾನವಾಗಿಯೇ ಚಲಾಯಿಸಿಕೊಂಡು ಹೋಗುತ್ತಿದ್ದ ಎಂದರೆ ಸರಿಯಲ್ಲ. ಚಾಸಾ-6 ರವರ ತಾಯಿ ಗ್ರಾಮ ಪಂಚಾಯತಿ ಅಧ್ಯಕ್ಷರು ಎಂದರೆ ಸರಿ. ಚಾಸಾ-6 ರವರು ಘಟನೆ ಆದಾಗ ಕೆಎಸಆರಟಿಸಿಯಲ್ಲಿ ಚಾಲಕ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ-6 ರವರ ಮನೆ ಕಡಗಂಚಿ ಕಡೆ ಎಸ.ಸಿ. ಓಣಿಯಲ್ಲಿ ಇದೆ ಎಂದರೆ ಸಾಕ್ಷಿ ಹೊಸ ಮನೆ ಇರುತ್ತದೆ ಹಳೆ ಮನೆ ಬೋಧನ ರಸ್ತೆಯಲ್ಲಿ ಇದೆ ಎಂದು ಹೇಳುತ್ತಾರೆ. ಚಾಸಾ-6 ರವರ ಹೊಲಗಳು ಕಡಗಂಚಿ ರಸ್ತೆ ಕಡೆ ಇವೆ ಎಂದರೆ ಸಾಕ್ಷಿ ಕಡಗಂಚಿ ರಸ್ತೆ ಕಡೆಗೆ, ಆಲೂರು ರಸ್ತೆ ಕಡೆಗೆ, ಬಬಲಾದ ಕಡೆಗೆ ಇರುತ್ತವೆ ಎಂದು ಹೇಳುತ್ತಾರೆ. ಈ ಮೂರು ಹೊಲಗಳು ಕುಶಪನ ತಾಂಡಾ ಕಡೆಗೆ ಬರುವುದಿಲ್ಲ ಎಂದರೆ ಸರಿ. ಕಡಗಂಚಿ ಕಡೆಯಿರುವ ಚಾಸಾ-6 ರವರ ಮನೆಯಿಂದ ಬಸ ನಿಲ್ದಾಣ 400 ಮೀಟರ ಅಂತರದಲ್ಲಿ ಇರುತ್ತದೆ. ಕಡಗಂಚಿ ಕಡೆಗೆ ಇರುವ ಮನೆಗಳ ನಿವಾಸಿಗಳು ಕಡಗಂಚಿ ಕಡೆಗೆ ವಾಕಿಂಗ ಹೋಗುತ್ತಾರೆ ಎಂದರೆ ಸಾಕ್ಷಿ ಚಾಸಾ-6 ರವರು ಬೋಧನ ಕಡೆಗೆ ವಾಕಿಂಗ ಹೋಗುತ್ತಾರೆ ಎಂದು ಹೇಳುತ್ತಾರೆ. ಬೋಧನ ಕಡೆಗೆ ಎಷ್ಟು ಜನ ವಾಕಿಂಗ ಹೋಗುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಹೇಳಿಕೆ ಪಡೆಯುವಾಗ ಎಷ್ಟು ಜನರ ಹೇಳಿಕೆ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ದಿ29.05.2022 ರಂದು ನಾನು ಬೆಳಗ್ಗೆ ಹೊಲದಲ್ಲಿ ನೀರು ಬಿಡುತ್ತಿದ್ದು 6.45 ಗಂಟೆಗೆ ಪಕ್ಕದಲ್ಲಿಯೇ ನಮ್ಮ ಕಾಕಾ ಕಾಕಿಯ ಮನೆ ಇದ್ದು ಅವರು ಅಳುವ ಶಬ್ದ ಕೇಳಿ ನಾನು ಹೋಗಿ ಕೇಳಿದಾಗ ಚಾಸಾ-6 ರವರು ಕರೆ ಮಾಡಿ ನನ್ನ ಮಗನಿಗೆ ಅಪಘಾತವಾಗಿ ಭೋದನ ಬ್ರಿಡ್ಜ ಮುಂದೆ ಮೃತಪಟ್ಟಿರುತ್ತಾನೆ ಎಂದು ತಿಳಿಸಿದನು ನಂತರ ನನ್ನನ್ನು ಅವರೊಂದಿಗೆ ಕರೆದುಕೊಂಡು ಹೋದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಲ್ಲಿ ಹೋಗಿ ನೋಡುವವರೆಗೂ ಮೃತಪಟ್ಟಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ-6 ರವರು 7.10 ಗಂಟೆಗೆ ಕುಶಪ್ಪನ ತಾಂಡಾದ ಬ್ರಿಡ್ಜ ಮುಂದೆ ಕ್ರೂಸರದವನು ಅತಿ ವೇಗವಾಗಿ ನಿಶ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಅಪಘಾತಪಡಿಸಿರುತ್ತಾನೆ ಎಂದು ತಿಳಿಸಿದರು ಎಂದು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಭಗವಂತರವರಿಗೆ ಭಾರಿ ರಕ್ತಗಾಯವಾಗಿ ಮುಖಕ್ಕೆ ತಲೆಗೆ ಪೆಟ್ಟಾಗಿ ಮೃತಪಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರೂಸರ ಸಂಖ್ಯೆ ಕೆಎ-48/ಎ00521 ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಲಕನ ಹೆಸರು ವಿಷ್ಣು ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕುಶಪ್ಪನ ತಾಂಡಾದ ಬಳಿ ವಾಹನ ಬಿಟ್ಟು ಓಡಿ ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-7, 8 ಘಟನೆ ನೋಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ರೀತಿ ಪೋಲಿಸರ ಎದುರು ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.